# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - MONDAY 10-4-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶೀಯಯನ್ ಪಾಮೆಣ್ಣೆ ದಾಸ್ತಾನು ಇಳಿಕೆ ಉತ್ಪಾದನೆ ಹೆಚ್ಚಳ

ಮಾರ್ಚ್ 2023 ರಲ್ಲಿ ಮಲೇಶಿಯಾದ ಪಾಮೆಣ್ಣೆ ದಾಸ್ತಾನು ಹಿಂದಿನ ತಿಂಗಳ 2.12 ಮಿಲಿಯನ್ ಟನ್‌ಗಳಿಂದ 21 ಶೇಕಡಾ ಇಳಿಕೆಯಾಗಿ 1.67 ಮಿಲಿಯನ್ ಟನ್‌ಗಳಾಗಿವೆಯೆಂದು MPOB ತನ್ನ ನಿರ್ವಹಣಾ ವರದಿಯಲ್ಲಿ ಪ್ರಕಟಿಸಿದೆ. ಇದೇ ವೇಳೆ ಉತ್ಪಾದನೆ ಫೆಬ್ರವರಿಯ ವರದಿಯಲ್ಲಿ ಟನ್‌ಗಳಿಂದ 2.77 ಶೇಕಡಾ ಹೆಚ್ಚಳವಾಗಿ 1.29 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ. ಕಚ್ಚಾ ಪಾಮೆಣ್ಣೆ ದಾಸ್ತಾನು ಫೆಬ್ರವರಿಯ 1.16 ಮಿಲಿಯನ್ ಟನ್‌ಳಿಂದ 23.16 ಶೇಕಡಾ ಇಳಿಕೆಯಾಗಿ 891,653 ಟನ್‌ಗಳಾಗಿವೆ. ಸಂಸ್ಕರಿತ ಪಾಮೆಣ್ಣೆ ದಾಸ್ತಾನು 959,451 ಟನ್‌ಗಳಿಂದ 18.56 ಶೇಕಡಾ ಇಳಿಕೆಯಾಗಿ 781,391 ಟನ್‌ಗಳಾಗಿವೆ. ಪಾಮೆಣ್ಣೆ ತಿರುಳು ಉತ್ಪಾದನೆ 316,781 ಟನ್‌ಗಳಿಂದ 2.20 ಶೇಕಡಾ ಹೆಚ್ಚಳದೊಂದಿಗೆ 323,741 ಟನ್‌ಗಳಿಗೇರಿದೆ. ಪಾಮೆಣ್ಣೆ ರಫ್ತು 1.13 ಮಿಲಿಯನ್ ಟನ್‌ಗಳಿಂದ 31.76 ಶೇಕಡಾ ಹೆಚ್ಚಳದೊಂದಿಗೆ 1.49 ಮಿಲಿಯನ್ ಟನ್ ಗಳಾಗಿದೆ. ಬಯೋಡೀಸೆಲ್ ರಫ್ತು 14,699 ಟನ್ ಗಳಿಂದ 118.56 ಶೇಕಡಾ ಹೆಚ್ಚಳದೊಂದಿಗೆ 32,127 ಟನ್‌ಗಳಾಗಿವೆ. ಪಾಮ್ ತಿರುಳು ಎಣ್ಣೆ ರಫ್ತು 59,888 ಟನ್‌ಗಳಿಂದ 39.43 ಶೇಕಡಾ ಹೆಚ್ಚಳದೊಂದಿಗೆ 83,503 ಟನ್‌ಗಳಾಗಿವೆ, ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ದಿನದ ಆರಂಭದಲ್ಲಿ ಸತತ 4 ನೇ ದಿನ ಇಳಿಕೆ ದಾಖಲಿಸಿ ಟನ್ ಗೆ 3790 ರಿಂಗಿಟ್ಸ್ ($ 860) ಆಗಿದೆಯೆನ್ನಲಾಗಿದೆ.

## ಗೋವಾದಲ್ಲಿ ಕಚ್ಚಾ ಗೋಡಂಬಿ ದರ ಕುಸಿತ ತಡೆಗೆ, ಆಮದು ನಿಯಂತ್ರಣಕ್ಕೆ ಮನವಿ

ಸರಕಾರ ಕಚ್ಚಾ ಗೋಡಂಬಿಗೆ ಕಿ.ಗ್ರಾಂ ರೂ. 150 ದರಕ್ಕೆ ಮಾರಾಟಕ್ಕೆ ಹೇಳಿದ್ದರೂ ರಾಜ್ಯದ ಮಾರುಕಟ್ಟೆಯಲ್ಲಿ ಕಿ. ಗ್ರಾಂ ಗೆ ರೂ.115 ಇಳಿಕೆಯಾಗಿ ರೈತರ ಉತ್ಪಾದನಾ ವೆಚ್ಚಕ್ಕೂ ಇಳಿಕೆಯಾ ದರದಲ್ಲಿ ಮಾರಾಟ ಮಾಡಬೇಕಾಗುತ್ತದೆಯೆನ್ನಲಾಗಿದೆ. ಆಮದು ನಿಯಂತ್ರಿಸಲು ಗೋಡಂಬಿ ಬೆಳೆಗಾರರು ಸರಕಾರಕ್ಕೆ ಮನವಿ ಮಾಡಿದ್ದಾರೆನ್ನಲಾಗಿದೆ.

## ಬೇಡಿಕೆ ಹೆಚ್ಚಳ ಉತ್ಪಾದನೆ ಇಳಿಕೆ ಸಕ್ಕರೆ ದರ ಹೆಚ್ಚಳ

ಹಿಂದಿನ ತಿಂಗಳ ಸಕ್ಕರೆ ಮಾರಾಟ ಕೋಟಾ ಪೂರ್ಣವಾಗಿ ಮಾರಾಟವಾಗಿರುವುದು, ಬೇಸಿಗೆ ಸೀಸನ್‌ನ ಬೇಡಿಕೆ ಹೆಚ್ಚಳ, ಉತ್ಪಾದನೆಯ ಇಳಿಕೆಯಿಂದ ದೇಶೀ ಮಾರುಕಟ್ಟೆಯಲ್ಲಿ ಸಕ್ಕರೆ ದರ ಕಿಲೋ ಗ್ರಾಂ ಗೆ ರೂ.1 ರಷ್ಟು ಹೆಚ್ಚಳವಾಗಿದೆ. ಈಗಲೂ ದರ ಹೆಚ್ಚಳವಾಗುತ್ತಿದೆ. ಉತ್ಪಾದನೆ ಇಳಿಕೆಯಿದ್ದರೂ ದೇಶೀ ಬೇಡಿಕೆಗಿಂತ ಹೆಚ್ಚಿನ ಉತ್ಪಾದನೆಯಾಗಬಹುದು. ದೇಶೀ ಹಾಗೂ ಹೆಚ್ಚವರಿ ಕಾಪು ದಾಸ್ತಾನಿಗಿಂತ ಹೆಚ್ಚಿನ ಉತ್ಪಾದನೆಯಾದಲ್ಲಿ ರಫ್ತು ಅವಕಾಶ ಸಿಗಬಹುದು. ಜಾಗತಿಕ ಮಾರುಕಟ್ಟೆಯಲ್ಲೂ ದರ ಹೆಚ್ಚಳವಾಗಿದೆ.

## ಕ್ವಿಂ.ಗೆ ರೂ 40,000 ದಾಟಿದ ಜೀರಿಗೆ ದರ

ಮೆಹ್ಸಾನದ ಊಂಜಾ ಮಾರುಕಟ್ಟೆಯಲ್ಲಿ ಜೀರಿಗೆ ದರ ಕ್ವಿಂ.ಗೆ ರೂ.40000 ದಾಟಿದೆಯೆನ್ನಲಾಗಿದೆ. ಒಟ್ಟು ಉತ್ಪಾದನೆ ಅಂದಾಜಿಗಿಂತ ಗಣನೀಯ ಇಳಿಕೆಯಾಗಿದೆಯೆನ್ನಲಾಗಿದೆ. ದೇಶೀ ಹಾಗೂ ರಫ್ತು ಬಳಿಕೆ ಹಾಗೂ ಬೇಡಿಕೆ ಹೆಚ್ಚಳವಿದ್ದೂ ದರ ಹೆಚ್ಚಳದಲ್ಲಿರುವ ಸಾಧ್ಯತೆಯಿದೆ.

## ಹೊಸ ಬೆಳೆಯ ಗೋಧಿ ಆವಕ ಗುಣಮಟ್ಟ ಗಣನೀಯ ಇಳಿಕೆ

ಹೊಸಬೆಳೆಯ ಕಟಾವಿನ ಆರಂಭವಾಗಿದ್ದು ಮಾರುಕಟ್ಟೆಗಳಿಗೆ ಆವಕ ಆರಂಭವಾಗಿದೆಯೆನ್ನಲಾಗಿದ್ದು, ಗುಣಮಟ್ಟ ಗಣನೀಯ ಕುಸಿತವಾಗಿದೆಯೆನ್ನಲಾಗಿದೆ. ಹೆಚ್ಚಿನ ತೇವಾಂಶವಿರುವುದರಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಮುಂದಿನ ದಿನಗಳಲ್ಲಿ ಗುಣಮಟ್ಟ ಉತ್ತಮದಾಗುವ ಸಾಧ್ಯತೆಯಿದೆಯೆನ್ನಲಾಗಿದೆ.